

ಹುಬ್ಬಳ್ಳಿಯ ಸಿದ್ಧಾರೂಢ ಮಠದ ದೀಪೋತ್ಸವ



ಬಾಯಿಗೆ ಚುಚ್ಚಿಕೊಂಡಿರವ ಮೈಲಾರ ಲಿಂಗೇಶ್ವರ ಜಾತ್ರೆಯಲ್ಲಿನ ಒಬ್ಬ ಭಕ್ತ



ಕುಮಟಾದ ಬಾಡದ ಶ್ರೀ ಕಾಂಚಿಕಾ ಪರಮೇಶ್ವರಿ ತೇರಿನ ಹೂವಿನ ಮಕ್ಕಳು

ಕ್ಯಾಮೆರಾ ಕೈಗೆತ್ತಿಕೊಂಡು ಎರಡು ವರ್ಷಗಳಾದರೂ ನನ್ನಲ್ಲಿರುವ ಭಾವನೆಗಳನ್ನು, ಕುತೂಹಲವನ್ನು ಚಿತ್ರಗಳ ಮೂಲಕ ಅಭಿವ್ಯಕ್ತಿಗೊಳಿಸಲು ಪರಿತಪಿಸುತ್ತಿರುವಾಗ ನನಗೆ ಆಶ್ರಯ ನೀಡಿದ್ದು ನನ್ನ ರಾಜ್ಯದ ವಿಶಿಷ್ಟ ಆಚರಣೆಗಳು – ಅದರಲ್ಲೂ ಜಾತ್ರೆಗಳು!

ಮೊದಮೊದಲು ನನಗೆ ಸುಲಭವಾಗಿ ಪ್ರಯಾಣ ಮಾಡಬಹುದಾದ ಬೆಂಗಳೂರಿನ ಸುತ್ತಮುತ್ತಲಿನ ಜಾತ್ರೆ ಮತ್ತು ಆಚರಣೆಗಳು ತುಂಬಾ ಆಕರ್ಷಿಸಿದ್ದವು. ಸುಲಭವಾಗಿ ಬೆಳಿಗ್ಗೆ ಎಲ್ಲ ಓಡಾಡಿ, ಚಿತ್ರ ತೆಗೆದು, ಆಫೀಸಿಗೆ ಸ್ವಲ್ಪ ತಡವಾದರೂ ಹೋಗಿಮುಟ್ಟಲು ತೊಂದರೆಯಾಗುತ್ತಿರಲಿಲ್ಲ. ಇನ್ನು ನನ್ನ ಊರು ಕುಮಟಾಕ್ಕೆ ಆಗಾಗ್ಗೆ ಹೋಗುತ್ತಾ ಇದ್ದುದರಿಂದ ಅಲ್ಲಿಯೂ ಆಚರಣೆಗಳ–ವೈಶಿಷ್ಟ್ಯಗಳ ಚಿತ್ರ ತೆಗೆಯಲು ಅನುಕೂಲವೇ ಆಗಿತ್ತು. ಆದರೂ ಫೋಟೊಗಳಲ್ಲಿ ವೈವಿಧ್ಯದ ಕೊರತೆ ಎದ್ದು ಕಾಣುತ್ತಿತ್ತು. ಅವರಿವರ ಬಳಿ ಮಾತನಾಡಿ ದುಃಖ



ಕುಂದಗೋಳದ ಕಾರ ಹುಣ್ಣಿಮೆ ಉತ್ಸವದ ಅಂಗವಾಗಿ ನಡೆಯುವ ಕರಿ ಬಂಡಿ ಉತ್ಸವದಲ್ಲಿನ ವೀರಗಾರರು

ತೋಡಿಕೊಂಡಾಗ ನನಗೆ ತಿಳಿದಿದ್ದು, ಚಿತ್ರಸರಣಿಗೆ ಅಗತ್ಯವಾದ ಸರಿಯಾದ ಅಧ್ಯಯನ ಮತ್ತು ಶಿಸ್ತುಬದ್ಧವಾದ ಚೌಕಟ್ಟಿನ ಕೊರತೆ ನನ್ನಲ್ಲಿದೆ ಎನ್ನುವುದು. ಅಧ್ಯಯನಶೀಲ ಛಾಯಾಗ್ರಹಣ ಅಷ್ಟು ಸುಲಭವಲ್ಲ ಅನ್ನುವುದು ಆಗಲೇ ತಿಳಿದಿದ್ದು. 'ಜರ್ನಲಿಸಂ' ದೃಷ್ಟಿಯಲ್ಲಿ ಸುಲಭವಾಗಿ ದಕ್ಕುವ ಫೋಟೋಗ್ರಫಿ, ಕಲಾತ್ಮಕ ವಿಧಾನದ ಚೌಕಟ್ಟಿನಲ್ಲಿ ಅತಿ ಕ್ಲಿಷ್ಟಕರ ಅನ್ನಿಸಿಬಿಡುತ್ತದೆ.

ತೇರು ಎಳೆಯುವ ಚಿತ್ರ ಒಂದು ಜಾತ್ರೆಯ ಕ್ಲೈಮಾಕ್ಸ್ ಅನ್ನಿಸುವುದು ಜರ್ನಲಿಸಂ ದೃಷ್ಟಿಯಲ್ಲಿ. ಪತ್ರಿಕೆಗಳಿಗೆ, ದೂರದಲ್ಲಿರುವ ಸಾಮಾನ್ಯ ಜನರಿಗೆ ತೇರು ಎಳೆದರೋ ಇಲ್ಲವೋ ಅನ್ನುವುದು ಮಾತ್ರ ಮುಖ್ಯ. ಅದಕ್ಕಾಗಿಯೇ ಎಲ್ಲೇ ಜಾತ್ರೆ ಆದರೂ ಪತ್ರಿಕೆಗಳಲ್ಲಿ, ಟೀವಿ ಮಾಧ್ಯಮಗಳಲ್ಲಿ ತೇರು ಎಳೆಯುವುದನ್ನು, ಜನಸ್ತೋಮವನ್ನು ತೋರಿಸಿ ವೈಭವೀಕರಿಸುತ್ತಾರೆ. ಆದರೆ ಪ್ರತಿ ಜಾತ್ರೆಯೂ ಒಳಗೊಂಡಿರುವ ಬಹುಸಂಕೀರ್ಣವಾದ ಮನುಷ್ಯ ಸಂಬಂಧ, ಭಾವನಾತ್ಮಕ, ಸಾಮಾಜಿಕ, ಆರ್ಥಿಕ ವ್ಯವಹಾರಗಳನ್ನು ಯಾರು ತೋರಿಸುತ್ತಾರೆ?